ಕಲ್ಯಾಣ ಯೋಜನೆಗಳೊಂದಿಗೆ ಒಗ್ಗೂಡಿಸುವ ಮಾರ್ಗಗಳನ್ನು ಕಂಡುಕೊಳ್ಳುವುದು, ಖಾಸಗಿ ವಲಯದ ತೊಡಗಿಸಿಕೊಳ್ಳುವಿಕೆಯನ್ನು ಬಳಸಿಕೊಳ್ಳುವುದು ಮತ್ತು ಸುಧಾರಿಸುವುದು, ಅಂತಿಮವಾಗಿ ದೇಶದಲ್ಲಿ ಕ್ಷಯ ನಿರ್ಮೂಲನೆ... ಇವೆಲ್ಲವೂ ಕ್ಷಯ ರೋಗ ನಿರ್ಮೂಲನಾ ಕಾರ್ಯಕ್ರಮದ ಗುರಿಯಾಗಿರುತ್ತದೆ. ಈ ಕೆಳಕಂಡ ಚಟುವಟಿಕೆಗಳನ್ನು ಕ್ಷಯಮುಕ್ತಗೊಳಿಸುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿದೆ.

- ಸಹಸೋಂಕಿತರು (ಎಚ್.ಐ.ವಿ. ಸೋಂಕಿತರು), ಮಕ್ಕಳು ಮತ್ತು ಶ್ವಾಸಕೋಶೇತರ ಕ್ಷಯ ಪ್ರಕರಣಗಳು ಮತ್ತು ಔಷಧ ನಿರೋಧಕ ಕ್ಷಯರೋಗ ಪತ್ತೆ ಮಾಡಲು, ಶಂಕಿಸಲಾಗಿರುವ ಕ್ಷಯ ರೋಗಿಗಳಲ್ಲಿ ಆರಂಭಿಕ ರೋಗ ನಿರ್ಣಯವನ್ನು ಖಚಿತಪಡಿಸಿಕೊಳ್ಳಲು ಸಿಬಿನಾಟ್ (CBNAAT) ಮತ್ತು ಟ್ರೂನಾಟ್ (TRUENAT) ನಂತಹ ಯಂತ್ರಗಳನ್ನು ಪರೀಕ್ಷೆಗೆ ನಿಯೋಜಿಸಲಾಗಿದೆ. ಔಷಧ ನಿರೋಧಕ ಕ್ಷಯರೋಗ ಪತ್ತೆ ಮಾಡಲು, 4 ಪೂರ್ಣ ಪ್ರಮಾಣದ Culture & Drugs Susceptibility Test ಪ್ರಯೋಗಾಲಯಗಳು ಬೆಂಗಳೂರಿನಲ್ಲಿ ಎರಡು, ಹುಬ್ಬಳ್ಳಿ ಮತ್ತು ರಾಯಚೂರುಗಳಲ್ಲಿ ತಲಾ ಒಂದೊಂದು ಲ್ಯಾಬ್‌ಗಳು ಕಾರ್ಯನಿರ್ವಹಿಸುತ್ತಿವೆ.
- ಡಿ.ಆರ್.ಟಿ.ಬಿ (Drug Resistant TB) ರೋಗಿಗಳಿಗೆ ಚಿಕಿತ್ಸೆ ಪ್ರಾರಂಭಿಸಲು ಮತ್ತು ಇತರೆ ಸೇವೆಗಳನ್ನು ಒದಗಿಸಲು 6 ನೋಡೆಲ್ ಡಿ.ಆರ್.ಟಿ.ಬಿ. ಹಾಗೂ 25 ಡಿ.ಆರ್. ಟಿ.ಬಿ. ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.



ಕ್ಷಯರೋಗವನ್ನು ಪತ್ತೆ ಹಚ್ಚಲು ನೇರ, ಕ್ಷಿಪ್ರ, ಆಣ್ವಿಕ ಪರೀಕ್ಷೆಗಳನ್ನು ಬಳಸುವ ಮೂಲಕ ಜಿಲ್ಲೆಗಳಲ್ಲಿ ಕ್ಷಯರೋಗ ಪ್ರಕರಣಗಳ ಪತ್ತೆ ಹೆಚ್ಚಳ ಕಂಡುಬಂದಿರುತ್ತದೆ. ಈ ಉದ್ದೇಶಕ್ಕಾಗಿ 75 ಸಿಬಿನಾಟ್ ಮತ್ತು 103 ಟ್ರೂನಾಟ್ ಯಂತ್ರಗಳು ಕಾರ್ಯನಿರ್ವಹಿಸುತ್ತಿವೆ.

- ಮೊದಲನೇ ಹಂತದಲ್ಲಿ ಗುರುತಿಸಲ್ಪಟ್ಟ ರಾಜ್ಯದ 16 ಜಿಲ್ಲೆಗಳಲ್ಲಿ ಸುಪ್ತ ಕ್ಷಯ ಸೋಂಕನ್ನು (Latent TB Infection) ಪತ್ತೆ ಹಚ್ಚಲು ಮತ್ತು ನಿರ್ವಹಿಸುವ ಕಾರ್ಯತಂತ್ರವನ್ನು ಅನುಷ್ಠಾನಗೊಳಸಲಾಗುತ್ತಿದೆ. ಇತರೆ ಜಿಲ್ಲೆಗಳಿಗೆ ಹಂತ ಹಂತವಾಗಿ ಇದನ್ನು ವಿಸ್ತರಿಸಲಾಗುವುದು. ವಲಸೆ, ದುರ್ಬಲವರ್ಗ ಮತ್ತು ಕ್ಷಯರೋಗಕ್ಕೆ ತುತ್ತಾಗುವ ಅಪಾಯ ಹೊಂದಿರುವ ಜನಸಂಖ್ಯೆಯನ್ನು ತಲುಪಲು ರಾಜ್ಯವು ಪ್ರತಿವರ್ಷ ಸಕ್ರಿಯ ಕ್ಷಯರೋಗ ಪತ್ತೆ ಆಂದೋಲನದ ಚಟುವಟಿಕೆ ಹಮ್ಮಿಕೊಂಡಿದ್ದು, 2020ರ ಡಿಸೆಂಬರ್ ತಿಂಗಳಲ್ಲಿ 30 ದಿನಗಳ ಸಕ್ರಿಯ ಕ್ಷಯರೋಗ ಪತ್ತೆ ಕಾರ್ಯಕ್ರಮದಲ್ಲಿ 1.5 ಕೋಟಿ ಜನಸಂಖ್ಯೆಯನ್ನು ತಪಾಸಣೆಗೊಳಪಡಿಸಿ, 92519 ಸಂಭಾವ್ಯ ಕ್ಷಯರೋಗಿಗಳನ್ನು ಪರೀಕ್ಷಿಸಿದ್ದು, ಅದರಲ್ಲಿ 2951 ಕ್ಷಯರೋಗಿಗಳನ್ನು ಪತ್ತೆ ಹಚ್ಚಲಾಗಿದೆ.
- ರಾಜ್ಯವು ಕ್ಷಯರೋಗಕ್ಕೆ ಸಂಬಂಧಿಸಿದಂತೆ ಸಹ ಅಸ್ವಸ್ಥತೆಗಳನ್ನು ನಿರ್ವಹಣೆ ಮಾಡುತ್ತಿದೆ. ಎನ್.ಟಿ.ಇ.ಪಿ. ಮತ್ತು ಕೆಸಾಪ್ಸ್, ಎಚ್.ಐ.ವಿ. ಕ್ಷಯ ಸೇವೆಗಳನ್ನು ಸಮರ್ಥ ಹಾಗೂ ಪರಿಣಾಮಕಾರಿಯಾಗಿ ಒದಗಿಸುತ್ತಿದೆ. ಎನ್. ಟಿ.ಇ.ಪಿ.ಯು ನೊಂದಾಯಿಸಿದ ಬಹುತೇಕ ಎಲ್ಲಾ ಕ್ಷಯರೋಗಿಗಳನ್ನು ಶೇ. 96 ಹೆಚ್.ಐ.ವಿ. ಪರೀಕ್ಷೆಗೊಳಪಡಿಸಲಾಗಿದೆ, ಅದರಲ್ಲಿ ಶೇ. 7 ಕ್ಷಯರೋಗಿಗಳು ಎಚ್.ಐ.ವಿ. ಸೋಂಕಿತರಾಗಿರುತ್ತಾರೆ. ಕ್ಷಯರೋಗದ ಲಕ್ಷಣಗಳುಳ್ಳ ಎಲ್ಲಾ ಎಚ್.ಐ.ವಿ. ಸೋಂಕಿತರಿಗೆ ಕ್ಷಯರೋಗದ ರೋಗ ನಿರ್ಣಯಕ್ಕಾಗಿ ಕ್ಷಿಪ್ರ ಆಣ್ವಿಕ (ಸಿಬಿನಾಟ್) ಪರೀಕ್ಷೆಗೊಳಪಡಿಸಲಾಗಿದೆ. ಸುಧಾರಿತ ಚಿಕಿತ್ಸೆಯ ಫಲಿತಾಂಶಕ್ಕಾಗಿ ನಿಗದಿತ ಡೋಸ್ ಸಂಯೋಜನೆಯೊಂದಿಗೆ (ಎಫ್. ಡಿ.ಸಿ.) ದೈನಂದಿನ ಚಿಕಿತ್ಸಾ ಕ್ರಮವನ್ನು ನಿರ್ವಹಿಸಲಾಗುತ್ತಿದೆ.
- ಮೇ 2012 ರಲ್ಲಿ ಭಾರತ ಸರ್ಕಾರವು ಹೊರಡಿಸಿದ ಕ್ಷಯರೋಗದ ಅಧಿಸೂಚನೆ ಆದೇಶದಂತೆ ಎಲ್ಲಾ ಆರೋಗ್ಯ ಪೂರೈಕೆದಾರರಿಗೆ ಕ್ಷಯರೋಗ ನಿರ್ಣಯ ಮತ್ತು ಚಿಕಿತ್ಸೆ ಪಡೆದವರನ್ನು ಎನ್.ಟಿ.ಇ.ಪಿ.ಗೆ ನೋಂದಣಿ ಮಾಡಲು ಆದೇಶಿಸಿದೆ. ಈ ಪ್ರಯತ್ನಗಳು ಭಾರತದಲ್ಲಿ ಕ್ಷಯರೋಗ ಆರೈಕೆಯ ಗುಣಮಟ್ಟಕ್ಕೆ (Standards for TB care in India) ಪೂರಕವಾಗಿದೆ. ಈ ಆದೇಶವು ಸಾರ್ವಜನಿಕ ಮತ್ತು ಖಾಸಗಿ ವಲಯದಲ್ಲಿ ಸರಿಯಾದ ರೋಗ ನಿರ್ಣಯ ಮತ್ತು ಚಿಕಿತ್ಸಾ ಪದ್ಧತಿಗಳನ್ನು ಉತ್ತೇಜಿಸಲಾಗಿದೆ.
- ರಾಜ್ಯ ಕಾರ್ಯಪಡೆಯ ಕಾರ್ಯವಿಧಾನದ (State Task Force) ಮೂಲಕ 56 ವೈದ್ಯಕೀಯ ಕಾಲೇಜುಗಳನ್ನು ಯಶಸ್ವಿಯಾಗಿ ಟಿಬಿ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳಲಾಗಿದೆ. ಪ್ರತೀ ಕಾಲೇಜಿನಲ್ಲಿ ಗುರುತಿಸಲ್ಪಟ್ಟ ನೋಡಲ್ ಅಧಿಕಾರಿ ಮತ್ತು ರೋಗ ನಿರ್ಣಯ ತಂತ್ರಜ್ಞಾನವನ್ನು ಹೊಂದಿರುವ ಎನ್. ಟಿ.ಇ.ಪಿ. ಕೋಶ ಸ್ಥಾಪಿಸಲಾಗಿದೆ. ಅಲ್ಲಿಯ ವೈದ್ಯಾಧಿಕಾರಿ, ಪ್ರಯೋಗಾಲಯ ತಂತ್ರಜ್ಞ ಮತ್ತು ಕ್ಷಯರೋಗ ಆರೋಗ್ಯ ಸಂದರ್ಶಕರು, ವೈದ್ಯಕೀಯ ಕಾಲೇಜಿನಲ್ಲಿ ಎಲ್ಲಾ ಇಲಾಖೆಗಳಿಂದ ಬರುವ ನಿರ್ದೇಶನ/ಅಧಿಸೂಚನೆಗಳಂತೆ ಕ್ಷಯರೋಗಿಗಳ ನಿರ್ವಹಣೆಯನ್ನು ಪ್ರತ್ಯೇಕವಾಗಿ ನಿರ್ವಹಿಸುತ್ತಿದ್ದಾರೆ.

